ದಕ್ಷಿಣಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಮಂಜೂರಾದ ಕೊಳವೆ ಬಾವಿಗಳು.

74 (160)

ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ 1997-98ನೇ ಸಾಲಿನಲ್ಲಿ ಮಂಜೂರಾಗಿರುವ ಕೊಳವೆಬಾವಿಗಳು ಎಷ್ಟು? (ತಾಲ್ಲೂಕುವಾರು ಮಾಹಿತಿ ನೀಡುವುದು)

ಆ) ಇದರಲ್ಲಿ ಎಷ್ಟು ಕೊಳವೆಬಾವಿಗಳನ್ನು ತೋಡಲಾಗಿದೆ? ಉಳಿದ ಕೊಳವೆಬಾವಿಗಳನ್ನು ಯಾವಾಗ ತೋಡಲಾಗುವುದು (ವಿವರ ನೀಡುವುದು)

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):

ಅ ಮತ್ತು ಆ) ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

ಜಿಲ್ಲೆ	1997-98ನೇ ಸಾಲಿನಲ್ಲಿ	
	ಮಂಜೂರಾದ ಕೊಳವೆಬಾವಿಗಳ ಸಂಖ್ಯೆ	ಫೆಬ್ರವರಿ 98ರ ಅಂತ್ಯದವರೆಗೆ ಕೊರೆಯಲಾದ ಕೊಳವೆಬಾವಿಗಳ ಸಂಖ್ಯೆ
ದಕ್ಷಿಣ ಕನ್ನಡ		
1. ಬೆಳ್ತಂಗಡಿ	96	90
2. ಬಂಟ್ವಾಳ	108	101
3. ಮಂಗಳೂರು	103	100
4. ಪುತ್ತೂರು	86	84
5. ಸೂಳ್ಯ	45	35

ಉಡುಪಿ

1. ಕಾರ್ಕಳ	84	81
2. ಕುಂದಾಪುರ	81	33
3. ಉಡುಪಿ	96	90
ಒಟ್ಟು	699	614

ಉಳಿದ 85 ಕೊಳವೆಬಾವಿಗಳನ್ನು ಮಾರ್ಚ್ 98ರ ಅಂತ್ಯದೊಳಗಾಗಿ ಕೊರೆಯಲಾಗುವುದು.

ಶಾಲಾ ಕೋಠಡಿಗಳ ನಿರ್ಮಾಣ

75 (71)

ಶ್ರೀ ಹೆಚ್.ಎಸ್.ಶಂಕರ್‌ಲಿಂಗೇಗೌಡ (ಚಾಮರಾಜ): ಮಾನ್ಯ ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995-96, 96-97, 97-98ರ ಅವಧಿಯಲ್ಲಿ ಚಾಮರಾಜ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಹಿರಿಯ ಪ್ರಾಥಮಿಕ ಶಾಲೆ ಹಾಗೂ ಸರ್ಕಾರಿ ಪ್ರೌಢಶಾಲೆಗಳಿಗೆ ಎಲ್ಲೆಲ್ಲಿ ಎಷ್ಟೆಷ್ಟು ಕೊಠಡಿಗಳನ್ನು ನಿರ್ಮಿಸಲಾಯಿತು. ಇದಕ್ಕೆ ತಗುಲಿದ ವೆಚ್ಚ ಎಷ್ಟು? (ವಿವರಗಳನ್ನು ನೀಡುವುದು)

ಆ) ಮುಂದೆ ನಿರ್ಮಿಸುವ ಯೋಜನೆಯಿದ್ದಲ್ಲಿ ಎಲ್ಲೆಲ್ಲಿ ನಿರ್ಮಿಸಲಾಗುವುದು, ತಗಲುವ ವೆಚ್ಚ ಎಷ್ಟು?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು):

(1) 1995-96ನೇ ಸಾಲಿನಲ್ಲಿ ನಿರ್ಮಿಸಿರುವ ಕೊಠಡಿಗಳ ವಿವರ		ರೂ.ಲಕ್ಷಗಳಲ್ಲಿ
1. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕುಕ್ಕರಹಳ್ಳಿ	2 ಕೊಠಡಿಗಳು	1.80
2. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಪಡುವಾರಹಳ್ಳಿ	2 ಕೊಠಡಿಗಳು	1.80